

# ಪುನೀತ್ ವಿಕ್ರಮ, ಗಣೇಶ್ ರಂಗೀಲಾ

‘ಧೀರ ರಣವಿಕ್ರಮ’ – ಪುನೀತ್ ರಾಜಕುಮಾರ್ ನಟಿಸಲಿರುವ ಹೊಸ ಚಿತ್ರದ ಹೆಸರು. ಚಿತ್ರದ ಶೀರ್ಷಿಕೆಯಲ್ಲಿನ ಧೀರ, ರಣ ಮತ್ತು ವಿಕ್ರಮ ಎನ್ನುವ ಮೂರು ಪದಗಳೂ ಶೌರ್ಯ ರಸದ ಸೂಚಕಗಳೇ ಆಗಿರುವುದರಿಂದ, ಈ ಚಿತ್ರ ಸಾಹಸಪ್ರಿಯರಿಗೆ ಹಬ್ಬವಾಗಿ ಪರಿಣಮಿಸಬಹುದು. ಪವನ್ ಒಡೆಯರ್ ನಿರ್ದೇಶನದ ಈ ಸಿನಿಮಾದಲ್ಲಿ ಪುನೀತ್ ಪೊಲೀಸ್ ಅಧಿಕಾರಿಯಾಗಿ ನಟಿಸಲಿದ್ದಾರೆ. ಇಷ್ಟು ಮಾತ್ರವಲ್ಲ, ಖಳ ಛಾಯೆಯ ಮತ್ತೊಂದು ಪಾತ್ರವನ್ನೂ ಅವರು ಪೋಷಿಸಲಿದ್ದಾರೆ. ‘ಎರಡು ನಕ್ಷತ್ರಗಳು’ ಚಿತ್ರಗಳಲ್ಲಿ ಬಾಲನಟನಾಗಿ ದ್ವಿಪಾತ್ರದಲ್ಲಿ ನಟಿಸಿದ್ದ ಪುನೀತ್, ‘ವೀರ ಕನ್ನಡಿಗ’ ಚಿತ್ರದಲ್ಲಿ ಅಪ್ಪ ಮಗನ ಪಾತ್ರದಲ್ಲಿ ನಟಿಸಿದ್ದರು. ಈಗ ಮತ್ತೊಮ್ಮೆ ತಮ್ಮನ್ನು ದ್ವಿಪಾತ್ರಾಭಿನಯ ಪ್ರಯೋಗಕ್ಕೆ ಒಡ್ಡಿಕೊಳ್ಳುತ್ತಿದ್ದಾರೆ.

ಪುನೀತ್ ಅವರ ‘ನಿನ್ನಿಂದಲೇ’ ಚಿತ್ರದ ಸೋಲಿನ ಹಿನ್ನೆಲೆಯಲ್ಲಿ ರಣವಿಕ್ರಮ ಚಿತ್ರಕ್ಕೆ ವಿಶೇಷ ಮಹತ್ವವಿದೆ. ಸದಭಿರುಚಿಯ ಚಿತ್ರಗಳು ಸೋಲು ಕಂಡ ಬೆನ್ನಲ್ಲೇ ಕನ್ನಡದ ನಾಯಕ ನಟರು ಸಾಹಸಪ್ರಧಾನ ಚಿತ್ರಗಳತ್ತ ಹೊರಳುವುದಕ್ಕೆ ಹೊಸ ಉದಾಹರಣೆಯಾಗಿ ರಣವಿಕ್ರಮ ಸಿನಿಮಾವನ್ನು ಗುರ್ತಿಸಬಹುದು. ಇಷ್ಟು ಮಾತ್ರವಲ್ಲ, ತೆರೆ ಕಾಣಲಿಕ್ಕೆ ತವಕಿಸುತ್ತಿರುವ ಪುನೀತ್ ಅವರ ಇನ್ನೊಂದು ಸಿನಿಮಾ ಕೂಡ (ತೆಲುಗಿನ ‘ದೂಕುಡು’ ಚಿತ್ರದ ರೀಮೇಕ್) ಹೊಡಿಬಡಿ ಕಥನವೇ. ಒಟ್ಟಿನಲ್ಲಿ 2014ರಲ್ಲಿ ಪುನೀತರ ‘ಪವರ್ ಸ್ಟಾರ್’ ಇಮೇಜ್ ಹೆಚ್ಚು ಕಂಗೊಳಿಸುವ ಎಲ್ಲ ಸಾಧ್ಯತೆಗಳಿವೆ.



ಯುಗಾದಿ ಸಂದರ್ಭದಲ್ಲಿ ಪುನೀತ್ ಬೇವುಬೆಲ್ಲದ ಲೆಕ್ಕಾಚಾರದಲ್ಲಿದ್ದರೆ, ಮತ್ತೊಬ್ಬ ನಟ ಗಣೇಶ್ ಅವರಿಗೆ ಹೊಸ ವರ್ಷದಲ್ಲಿ ಬೆಲ್ಲದ ಪಾಲೇ ಹೆಚ್ಚಾದಂತಿದೆ. ‘ಶ್ರಾವಣಿ ಸುಬ್ರಹ್ಮಣ್ಯ’ ಚಿತ್ರದ ಗೆಲುವು ಅವರ ವೃತ್ತಿಜೀವನಕ್ಕೆ ಓಯಸಿಸ್ ರೂಪದಲ್ಲಿ ಪರಿಣಮಿಸಿದೆ. ಸಾಲು ಸಾಲು ಸೋಲುಗಳ ನಂತರ ದೊರಕಿದ ಹಿತವಾದ ಗೆಲುವು ಸಹಜವಾಗಿಯೇ ಅವರನ್ನು ಪುಳಕಿತರನ್ನಾಗಿಸಿದೆ. ಇದರ ಬೆನ್ನಿಗೇ, ಪ್ರೀತಂ ಗುಬ್ಬಿ ನಿರ್ದೇಶನದ ‘ದಿಲ್ ರಂಗೀಲಾ’ ಚಿತ್ರದ ಬಗ್ಗೆ ಕೂಡ ‘ಪರವಾಗಿಲ್ಲ’ ಎನ್ನುವ ಮಾತುಗಳು ಗಾಂಧಿನಗರದಲ್ಲಿ ಕೇಳಿಸುತ್ತಿವೆ. ಇದರರ್ಥ ಇಷ್ಟೇ– ಗಣೇಶ್ ವೃತ್ತಿಜೀವನದಲ್ಲೀಗ ಮತ್ತೆ ವಸಂತದ ಚಿಗುರು.

ಸದ್ಯಕ್ಕೆ ಗಣೇಶ್ ಕೈಯಲ್ಲಿ ತುಂಬಾ ಚಿತ್ರಗಳೇನೂ ಇಲ್ಲ. ‘ರೋಮಿಯೊ’ ನಿರ್ದೇಶಿಸಿದ್ದ ಪಿ.ಸಿ. ಶೇಖರ್ ಅವರ ಚಿತ್ರವೊಂದರಲ್ಲಿ ನಟಿಸಲು ಅವರು ಒಪ್ಪಿಕೊಂಡಿದ್ದಾರೆ. ಉಳಿದಂತೆ ತೆಲುಗು ಚಿತ್ರವೊಂದನ್ನು ಕನ್ನಡಕ್ಕೆ ತರುವ ಸಿದ್ಧತೆಗಳು ನಡೆಯುತ್ತಿವೆ. ಎರಡು ಚಿತ್ರಗಳ ಗೆಲುವಿನಿಂದಾಗಿ ಗಣೇಶ್ ಅವರಿಗೆ ಮತ್ತಷ್ಟು ಅವಕಾಶಗಳು ದೊರೆಯುವುದು ಸಹಜ. ಆದರೆ, ಅವರು ತಮ್ಮ ಮುಂದಿನ ಚಿತ್ರಗಳ ಬಗ್ಗೆ ಅತೀವ ಎಚ್ಚರಿಕೆ ವಹಿಸಬೇಕಾಗಿದೆ. ಯಶಸ್ಸಿನ ಉತ್ತುಂಗದಿಂದ ಒಮ್ಮಿಂದೊಮ್ಮೆಗೇ ಕೆಳಗೆ ಜಾರಿದ ಅನುಭವ ಅವರ ಜೊತೆಗಿದ್ದೇ ಇದೆ.

■ ರಘು

Printed and Published by S.V. Srinivasan on behalf of The Printers (Mysore) Private Ltd. Printed at Rajhans Enterprises, No.134, 4th Main Road, Industrial Town, Rajajinagar, Bangalore- 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bangalore - 560074. Editor: K.N. TILAK KUMAR.
Editorial Office: 75, M.G Road, Bangalore-560 001 E-mail:editorsu@sudha.co.in. Phone: 2588 0000, Fax: 25880618, Editorial:25880619, Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65